JULY 02, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೆಂಗಳೂರು ದಕ್ಷಿಣ ತಾಲೂಕು, ಮಾದ ಪಟ್ಟಣದ ಕ್ರಷರ್‌ವೊಂದರಲ್ಲಿ, ಇಂದು ಬೆಳಗ್ಗೆ 7.30ಕ್ಕೆ ಬಂಡೆ ಕುಸಿದ ಪರಿಣಾಮ, ಅಸ್ಸಾಂ ಹಾಗೂ ಬಿಹಾರ ಮೂಲದ, 7 ಜನ ಕಾರ್ಮಿಕರು ಸಾವನ್ನಪ್ಪಿದ್ದು, ಐವರಿಗೆ ಗಂಭೀರ ಗಾಯಗಳಾಗಿವೆ ಎಂದು, ಪ್ರಾಥಮಿಕ ವರದಿಗಳು ತಿಳಿಸಿವೆ. ತಾವರೆಕೆರೆ ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ಪರಿಹಾರ ಕಾರ್ಯಾಚರಣೆಯೊಂದಿಗೆ, ತನಿಖೆ ಆರಂಭಿಸಿದ್ದಾರೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು, ಕಳವಳ ವ್ಯಕ್ತಪಡಿಸಿದ್ದಾರೆ. ಆರ್.ಆರ್. ಮೆಡಿಕಲ್ ಕಾಲೇಜ್‌ಗೆ, ಶವಗಳನ್ನು ರವಾನಿಸಿದ್ದಾರೆ.

<><><>

ಮಂಗಳೂರಿನ ನಾಗುರಿಯಲ್ಲಿ, ಆವರಣ ಗೋಡೆ, ಮನೆ ಮೇಲೆ ಕುಸಿದ ಪರಿಣಾಮ, ಇಬ್ಬರು ಮಕ್ಕಳು ಸೇರಿದಂತೆ, ಓರ್ವ ಮಹಿಳೆ ಮೃತಪಟ್ಟಿದ್ದಾರೆ. ಉಡುಪಿ ಜಿಲ್ಲೆ, ಪಣಿಯೂರಿನ ಶಾಂತಾ, ಬಿಹಾರ ರಾಜ್ಯದ, ಗೋಪಾಲಗಂಜ್ ಜಿಲ್ಲೆಯ, ಕಟಿಯಾ ತಾಲೂಕಿನ, ರುದ್ರಪುರ ಗ್ರಾಮದ, ಬಾಲಕಿಯರಾದ ಅನಾಮಿಕಾ ಹಾಗೂ ತನು ಚೌರಾಸಿಯಾ, ಮೃತಪಟ್ಟಿದ್ದು ಕೆಲವರಿಗೆ ಗಾಯಗಳಾಗಿವೆ ಎಂದು, ವರದಿ ತಿಳಿಸಿದೆ.

<><><>

ಕಾಡು ಔಡಲ ಬೀಜ ಸೇವಿಸಿ, 25 ಮಕ್ಕಳು ಅಸ್ವಸ್ಥಗೊಂಡ ಘಟನೆ, ಗದಗ ತಾಲೂಕಿನ ಬೆಳಧಡಿ ತಾಂಡಾದಲ್ಲಿ, ಸಂಭವಿಸಿದೆ. 2, 3 ಹಾಗೂ 4ನೇ ತರಗತಿಯ, 18 ಬಾಲಕಿಯರು, 9 ಬಾಲಕರ ಆರೋಗ್ಯದಲ್ಲಿ ಏರುಪೇರಾಗಿದ್ದು, ಮಕ್ಕಳನ್ನು ಗದಗ ನಗರದ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿ.ಡಿ.ಪಿ.ಐ. ಪರಿಶೀಲಿಸಿದ್ದಾರೆ.

<><><>

'ವಚನ ಪಿತಾಮಹ', ಡಾಕ್ಟರ್ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಜನ್ಮದಿನವಿಂದು. ಹುಬ್ಬಳ್ಳಿ ಶಾಸಕ ಮಹೇಶ ಟೆಂಗಿನಕಾಯಿ, ಫ.ಗು. ಹಳಕಟ್ಟಿ ಅವರ ಜಯಂತಿಯಂದು, ಗೌರವ ನಮನ, ಸಲ್ಲಿಸಿದ್ದಾರೆ. ವಚನಗಳು ಕೇವಲ ಸಾಹಿತ್ಯವಲ್ಲ; ಅವು ಬದುಕಿನ ದಾರಿದೀಪಗಳು. ಅಂತಹ ದಾರಿದೀಪಗಳನ್ನು ನಮಗೆ ದಕ್ಕಿಸಿಕೊಟ್ಟ, ಫ.ಗು. ಹಳಕಟ್ಟಿ ಅವರ ಬದುಕು ನಮಗೆಲ್ಲರಿಗೂ ಆದರ್ಶಪ್ರಾಯ ಎಂದಿದ್ದಾರೆ.

<><><>

ಆಕಾಶವಾಣಿ ತನ್ನ, ಬ್ರಾಡ್‌ಕಾಸ್ಟಿಂಗ್ ಹೌಸ್ ಫೋಟೋ ಗ್ಯಾಲರಿ, 'ಸ್ವರ ಪ್ರೇರಣಾ ವೀಥಿಕಾ'ವನ್ನು, ಹೊಸ ದಿಲ್ಲಿಯ ಆಕಾಶವಾಣಿ ಭವನದ, ರಂಗಭವನ ಸಭಾಂಗಣದಲ್ಲಿ, ಅನಾವರಣಗೊಳಿಸಿದೆ. ಛಾಯಾಚಿತ್ರ ಗ್ಯಾಲರಿಯನ್ನು, ಬಾನ್ಸುರಿ ಕಲಾವಿದ, ಪದ್ಮ ವಿಭೂ ಣ, ಪಂಡಿತ ಹರಿಪ್ರಸಾದ ಚೌರಾಸಿಯಾ, ಉದ್ಘಾಟಿಸಿದರು. ಫೋಟೋ ಗ್ಯಾಲರಿಯಲ್ಲಿ, ಭಾರತರತ್ನ ಪುರಸ್ಕೃತ ವಿದುಷಿ ಎಂ.ಎಸ್. ಸುಬ್ಬುಲಕ್ಷ್ಮಿ, ಉಸ್ತಾದ್ ಬಿಸ್ಮಿಲ್ಲಾ ಖಾನ್, ಪಂಡಿತ ಭೀಮಸೇನ ಜೋಶಿ, ಪಂಡಿತ ರವಿಶಂಕರ, ಲತಾ ಮಂಗೇಶ್ಕರ ಹಾಗೂ ಪಂಡಿತ ಭೂಪೇನ್ ಹಜಾರಿಕಾ ಅವರ ಅಪರೂಪದ ಚಿತ್ರಗಳಿವೆ.

<><><>

ಜುಲೈ ಮೊದಲ ವಾರದಲ್ಲಿ ಆಚರಿಸಲಾಗುವ, ವನ ಮಹೋತ್ಸವ, ಮರಗಳ ಮಹತ್ವ ಮತ್ತು ಹಸಿರು ಭೂ ಗ್ರಹಕ್ಕಾಗಿ, ಸಾಂಘಿಕ ಪ್ರಯತ್ನವನ್ನು, ಪ್ರೋತ್ಸಾಹಿಸುತ್ತದೆ. ಸಸಿಗಳನ್ನು ನೆಟ್ಟು, ಸಂರಕ್ಷಿಸುವ ಮೂಲಕ, ಆರೋಗ್ಯಕರ, ಹಸಿರು ಮತ್ತು ಹೆಚ್ಚು ಸುಸ್ಥಿರ ಭೂಮಿಯಲ್ಲಿ, ಭವಿಷ್ಯಕ್ಕಾಗಿ ಹೂಡಿಕೆ ಬಗ್ಗೆ, ಜನ ಜಾಗೃತಿ ಮೂಡಿಸಲು, ಈ ದಿನ ಮೀಸಲಿದೆ.

<><><>

ಕೇಂದ್ರ ಪುರಸ್ಕೃತ, ನೂತನ, ವಿಕಸಿತ ಭಾರತ ರೋಜಗಾರ ಮತ್ತು ಆಜೀವಿಕಾ ಮಿಷನ್ ಗ್ರಾಮೀಣ – ವಿ.ಬಿ. ಜಿ ರಾಮ್ ಜಿ ಕಾಯ್ದೆ 2025, ನಿನ್ನೆಯಿಂದ ದೇಶಾದ್ಯಂತ ಜಾರಿಗೆ ಬಂದಿದೆ. ಅರ್ಹ ಗ್ರಾಮೀಣ ಕುಟುಂಬಗಳಿಗೆ, 100 ದಿನಗಳ ಬದಲಾಗಿ, 125 ದಿನಗಳ ಕೂಲಿ, ನೂತನ ಕಾಯ್ದೆ ಅಡಿ, ದೊರೆಯಲಿದೆ. ಹೊಸ ಯೋಜನೆ ಅಡಿ, ರಾಷ್ಟ್ರೀಯ ಸರಾಸರಿ ಕೂಲಿ, 327 ರೂಪಾಯಿ 40 ಪೈಸೆಗೆ ಏರಿಕೆಯಾಗಿದೆ. ನಿನ್ನೆ, ಜುಲೈ 1 ರಿಂದ, ಈ ದರ ಅನ್ವಯವಾಗಿದೆ ಎಂದು, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ, ತಿಳಿಸಿದೆ.

<><><>

ರಾಜ್ಯ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಈಶ್ವರ ಖಂಡ್ರೆ, ದಾವಣಗೆರೆಯಲ್ಲಿ ಮಾತನಾಡಿ, ವಿ.ಬಿ. ಜಿ ರಾಮ್ ಜಿ ಯೋಜನೆ ಜಾರಿಗೆ, ಕೆಲ ಬದಲಾವಣೆಗೆ ಆಗ್ರಹಿಸಿ, ರಾಜ್ಯ ಸರ್ಕಾರ ಸಮ್ಮತಿಸಿದೆ ಎಂದರು.

<><><>

ಈಶ್ವರ ಖಂಡ್ರೆ ಧ್ವನಿ 45 ಸೆಕೆಂದುಗಳು

<><><>

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿ ಸುಧಾರಿಸುತ್ತಿದ್ದು, ಕೇಂದ್ರ ಸರ್ಕಾರ, ವಾಣಿಜ್ಯ ಬಳಕೆಯ 19 ಕಿಲೋ ಎಲ್.ಪಿ.ಜಿ. ಸಿಲಿಂಡರ್ ದರವನ್ನು, 183 ರೂಪಾಯಿಗಳಷ್ಟು ಇಳಿಸಿದೆ. ಗೃಹ ಬಳಕೆಯ, 14.2 ಕಿಲೋ ತೂಕದ ಎಲ್.ಪಿ.ಜಿ. ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. 942 ರೂಪಾಯಿ ದರವನ್ನು ಮುಂದುವರಿಸಿದೆ.

<><><>

ರಾಜ್ಯದ ಕರಾವಳಿ ಭಾಗಕ್ಕೆ, ಇಂದು ರೆಡ್ ಅಲರ್ಟ್ ಘೋಷಿಸಿರುವ ಹವಾಮಾನ ಇಲಾಖೆ, ಭಾರೀ ಗಾಳಿಯೊಂದಿಗೆ, ರಭಸದ ಮಳೆಯಾಗುವ ಮುನ್ಸೂಚನೆ ನೀಡಿದೆ.ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳಿಗೆ ರೆಡ್ ಅಲರ್ಟ್, ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ, ಮುನ್ನೆಚ್ಚರಿಕೆ ನೀಡಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.